ಬೆನ್ನಲ್ಲೇ ಬಂದವನು, "ಸ್ವಲ್ಪ ನಿಮ್ಮ ಸೆರಗು ತೆಗೆದು ಬಿಡಿ" ಎಂದ. ಕೊಂಚ ಮುಜುಗರವಾದರೂ ತೆಗೆದು ಕೈಯಲ್ಲಿ ಹಿಡಿದು ನಿಂತೆ. ಭುಜ, ಕತ್ತು ಮುಂದಿನ ಡೀಪ್, ಹಿಂದಿನ ಡೀಪ್ ತೋಳಿನ ಸುತ್ತಳತೆ ಎಲ್ಲವನ್ನು ಬರೆದುಕೊಂಡು ಟೇಪನ್ನು ವಕ್ಷಭಾಗಕ್ಕೆ ಸುತ್ತಿಸುವವನಂತೆ ಬೆನ್ನಿನಿಂದ ಕಂಕುಳಡಿ ಹಾಸಿ ಸ್ಥನಾಗ್ರದ ಬಿಂದುವಿನಲ್ಲಿ ಕೈ ಹಾಸಿ ನಡುವಿನಲ್ಲಿ ಎರಡೂ ಬೆರಳುಗಳನ್ನು ಕೂಡಿಸುವಾಗ ಅವನ ಉಳಿದ ಮೂರು ಬೆರಳುಗಳು ಸ್ಥನಾಗ್ರವನ್ನು ನೇವರಿಸಿದಾಗ ಒಂದು ಕ್ಷಣ ನನ್ನ ಅರಿವು ಸತ್ತೇ ಹೋಗಿತ್ತು. ಅಲ್ಲೇ ಆ ಕ್ಷಣ... ತೊಟ್ಟ ರವಿಕೆಯನ್ನು ಕಿತ್ತೆಸೆದು ಆ ಕೈಗಳಿಂದ ಎಲ್ಲವನ್ನು ನೇವರಿಸಿಕೊಳ್ಳಬೇಕೆನಿಸುವಂತಹ ಉತ್ಕಟ ಭಾವವೊಂದು ಹಬ್ಬಿ ನಿಂತಿತ್ತು! ಸಾವರಿಸಿಕೊಂಡೆ. ಅವನೆಲ್ಲವನ್ನೂ ಅಳೆದು ಬರಕೊಂಡ ಮೇಲೂ ಸೆರಗು ಹೊದೆಯುವುದನ್ನು ಮರೆತು ನಿಂತಿದ್ದೆ. ಮೈ ಮಲೆತು ನಿಂತಿತ್ತು! ಇನ್ನಿಲ್ಲಿ ಬರುವುದೇ ಬೇಡವೆಂದು ನಿರ್ಧರಿಸಿದ್ದೆ. ಕೆಲಸದ ಜಯಾಳ ಬಳಿ ಹಣ ಕಳುಹಿಸಿ ರವಿಕೆ ತರ ಹೇಳಿದೆ. ಅವನದನ್ನು ಕೊಟ್ಟು ಕಳುಹಿಸಲಿಲ್ಲ.

"ಇಲ್ಲೇ ಬಂದು ಹಾಕಿಕೊಂಡು ತೋರಿಸಲಿ, ರಿಪೇರಿಯಿದ್ದರೆ ಸರಿ ಮಾಡುತ್ತೇನೆ" ಎಂದು ಹೇಳಿ ಕಳಿಸಿದ. ಅವನು ಹೊಲೆದ ರವಿಕೆಯನ್ನು ತೊಟ್ಟು ಅವನನ್ನು ಆ ಕಿರು ಕೋಣೆಯೊಳಗೆ ಕರೆದಾಗ ಬಂದು ನೋಡಿದವನು ,"ಓ ಸ್ವಲ್ಪ ಸೊಂಟ ಹಿಡಿಯಬೇಕು, ಈ ಬ್ರೆಸ್ಟ್‌ಲೈನಿರುವವರಿಗೆ ಇಷ್ಟು ಸಣ್ಣ ಸೊಂಟ ಅಪರೂಪ" ಎಂದ. ಒಂದೇ ನಿಮಿಷದಲ್ಲಿ ಹಿಡಿದು ಮತ್ತೊಮ್ಮೆ ತೊಟ್ಟು ನಿಂತಾಗ ನಡುವಿನ ಭಾಗದ ಬಟ್ಟೆಯನ್ನು ಹಿಡಿದೆಳೆಯುತ್ತಾ... ಈಗ ಸರಿಯಾಯ್ತು ಎಂದ. ಮತ್ತೆ ಆ ಸನಿಹ... ಬವಳಿ ಬೀಳುವಂತಾಯ್ತು ಅವನ ಗರಿಮುರಿಯಾದ ಶರ್ಟಿನೊಳಗೆ ಇಣುಕುತ್ತಿದ್ದ ಮಾಂಸಲ ಮೈಯನ್ನು ಸರೀ ನನ್ನೆದುರು ಚಾಚುವಂತೆ ನಿಲ್ಲುತ್ತಾ, "ಎಲ್ಲಿ ಭುಜ ಇಳೀತಿದೀಯ ನೋಡಣ" ಎಂದು ಎರಡೂ ಭಜಗಳ ಮೇಲೆ ಕೈಯಿಟ್ಟು ಒಂದಿಷ್ಟು ಹತ್ತಿರವಾದ. ನನ್ನ ಮುಖದಲ್ಲಿ ಬೆವರೊಡೆದಿದ್ದು ಅವನಿಗೆ ಗೊತ್ತಾಯಿತು. ಅಷ್ಟರಲ್ಲಿ ಅವನೂ ಸೆಟೆದು ನಿಂತಿದ್ದು ನನ್ನರಿವಿಗೂ ಬಂದಿತ್ತು. ನಾನು ಯಾವ ಮಾತೂ ಆಡದೆ ಅವನು ಕೊಟ್ಟ ರವಿಕೆಯನ್ನು ಹಿಡಿದು ಮನೆಯತ್ತ ನಡೆದಿದ್ದೆ. "ನಾಳೇನೇ ಬನ್ನಿ ಬ್ಲೂ ಬ್ಲೌಸ್ ಹೊಲಿದಿರ್ತೀನಿ" ಎಂದ. "ಹೂಂ" ಗುಟ್ಟಿದ್ದು ನನಗೂ ಕೇಳಿಸಿರಲಿಲ್ಲ. ಮತ್ತದೇ ಪುನರಾವರ್ತನೆ. ಅವನು ನನ್ನ ಹತ್ತಿರಕ್ಕೆ ಬಂದರೆ ಮೈಯಲ್ಲಿ ಬೆಂಕಿಯ ತರಂಗಗಳು ಉದ್ಭವಿಸಿ ಆ ಶರೀರವನ್ನು ಅಲ್ಲೇ ಮೋಹಿಸಿ ಸುಖಿಸುತ್ತಾ ನಾನೂ ಸುಟ್ಟು ಅವನನ್ನು ಸುಟ್ಟು ಹಾಕಿ ಸಮಾಧಿಯಾಗೋಣವೆನಿಸುತ್ತಿತ್ತು.

ಕಾಮವೊಂದು ಕಮೋಡಿಟಿಯಾಚೆಯ ನಿಕಟವಸ್ತುವಾಗಿ ಕಾಡಿದ್ದು ಅದೇ ಮೊದಲು. ವಿವಾಹ ಜೀವನದ ಹಾಸಿಗೆಯ ಪರ್ವದಲ್ಲಿ ಅದೆಷ್ಟೇ ತನ್ಮಯತೆಯಿದ್ದರೂ ಬೆಂಕಿಯೊಂದು ಅಲ್ಲಿರಲಿಲ್ಲ. ಆ ಬೆಂಕಿಯನ್ನು ಅರಸುತ್ತಾ ಹಿಂದೆ ಹೋಗಿಬಿಟ್ಟೆ. ಎಷ್ಟೋ ಕಾಲ ಅದು ತಪ್ಪೆನ್ನಿಸಲೂ ಇಲ್ಲ. ಪದೇ ಪದೇ ಸೇರಲು ಕಾರಣಗಳನ್ನು ಸೃಷ್ಟಿಸಿಕೊಳ್ಳಲು ಕಷ್ಟವಾದ ಕಾರಣ... ಬೆಂಕಿಯ ಮೋಹಕ್ಕೆ ದೂರದಲ್ಲಿ ಕುಳಿತು ಮೈ ಕಾಯಿಸಿಕೊಳ್ಳುವುದಕ್ಕಿಂತಲೂ ಅದರೊಳಗೇ ಲಯವಾಗುವುದೇ ಸುಖವೆಂದು ಜಿಗಿದುಬಿಟ್ಟೆ! ಆ ಸುಖ ನಿಜವೂ ಆಗಿತ್ತು, ಅದು ಹೇಗಿತ್ತೆಂದರೆ... ಮಲೇರಿಯಾ ರೋಗಿಯೊಬ್ಬ ಮೈಮೇಲೆ ಪರಿವೆಯಿಲ್ಲದೆ ಸುರಿದುಕೊಳ್ಳುವ ಕುದಿನೀರಿನಂತೆ! ಎಷ್ಟು ಸುರಿದರೂ ಇನ್ನೂ ಬೇಕೆನಿಸುವ ತಾಪ, ದಾಹ! ದಾಹ ತಣಿಯದಷ್ಟು ನಾನವನಲ್ಲಿ ಮುಳುಗಿ ಹೋಗಿದ್ದೆ. ನಿಮ್ಮನ್ನು ಬಿಟ್ಟು ಹೋಗಿದ್ದು ನಿಮ್ಮ ಮೇಲಣ ತಿರಸ್ಕಾರದಿಂದಲ್ಲ. ನಿಮ್ಮ ಅರೆಕೊರೆ ಗಳಿಗಾಗಿಯೂ ಅಲ್ಲ. ಉಗುರು ಬೆಚ್ಚಗಿನ ನೀರಿಲ್ಲಿ ಮೀಯುವವರು ಕುದಿನೀರ ರಭಸಕ್ಕೆ ಮೈಯೊಡ್ಡಬೇಕೆನ್ನಿಸುವ ಹಪಹಪಿಗೆ... ಆ ಅನಿವಾರ್ಯಕ್ಕೆ" ಎಂದು ಕಣ್ಣೊರೆಸಿಕೊಂಡಳು.